**ದಿ: 26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಆರ್ ಕೆ ವಕೀಲರಿಂದ:**

1. 1ನೇ ಪ್ರತಿವಾದಿಯ ತಂದೆ ಹೆಸರು ನಬಿಸಾಬ, ಅವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಬಿಸಾಬ ಇವರಿಗೆ ಹುಸೇನಸಾಬ ಎಂಬ ಸಹೋದರ ಇದ್ದರು ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರಿಗೆ ಮಕ್ಕಳಿರುವುದಿಲ್ಲ ಎಂದರೆ ಸಾಕ್ಷಿಯು ದಸ್ತಗಿರಿ ಎಂಬ ಮಗನಿದ್ದನು ಅವರು ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಹುಸೇನಸಾಬ ಮತ್ತು ನಬಿಸಾಬ ಇವರು ಬೇರೆ ಬೇರೆಯಾಗಿದ್ದರು. ಅವರಿಗೆ ಯಾವ ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ಪರಾಪುರ ಗ್ರಾಮದ ಜಮೀನು ಸ ನಂ 48, ವಿಸ್ತೀರ್ಣ 07 ಎಕರೆ 32 ಗುಂಟೆ ಹುಸೇನಸಾಬ ಇವರ ಭಾಗಕ್ಕೆ ಬಂದಿದೆ ಎಂದರೆ ಸಾಕ್ಷಿಯು ಹುಸೇನಸಾಬ ಇವರ ಭಾಗಕ್ಕೆ ಬಂದಿಲ್ಲ ನಬೀಸಾಬ ಇವರಿಗೆ ಬಂದಿತ್ತು ಅವರಿಂದ 1ನೇ ಪ್ರತಿವಾದಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ. ದಾವಾ ಹೊಲ ಸರ್ವೆ ನಂಬರ್ 65 ನಬೀಸಾಬ ಇವರ ಭಾಗಕ್ಕೆ ಬಂದಿರುತ್ತದೆ. ಹುಸೇನಸಾಬ ಇವರ ಭಾಗಕ್ಕೆ ಯಾವ ಜಮೀನು ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಪರಾಪುರ ಗ್ರಾಮದ ಜಮೀನು ಸ ನಂ 48, ವಿಸ್ತೀರ್ಣ 07 ಎಕರೆ 32 ಗುಂಟೆ ಹುಸೇನಸಾಬ ಇವರ ಭಾಗಕ್ಕೆ ಬಂದಿದೆ ಎಂದರೆ ಸಾಕ್ಷಿಯು ಬಂದಿಲ್ಲ ಎಂದು ಹೇಳುತ್ತಾರೆ. ಹುಸೇನಸಾಬ ಮತ್ತು ಅವರ ಮಗ ತೀರಿಕೊಂಡಿದ್ದು ಅವರ ದೊಡ್ಡಪ್ಪ 1ನೇ ಪ್ರತಿವಾದಿಗೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ನಬೀಸಾಬ ಮಾಡಿಸಿಕೊಂಡಿರುತ್ತಾರೆ ಅವರಿಂದ ಮೈನುದ್ದೀನ್ ಗೆ ಬಂದಿರುತ್ತದೆ ಎನ್ನುತ್ತಾರೆ. ಪರಾಪುರ ಗ್ರಾಮ ಜಮೀನು ಸರ್ವೆ ನಂಬರ್ 48, ವಿಸ್ತೀರ್ಣ 07 ಎಕರೆ 32 ಗುಂಟೆ ಮತ್ತು ದಾವಾ ಜಮೀನು ಸರ್ವೆ ನಂಬರ್ 65 ನಬೀಸಾಬ ಇವರ ಹೆಸರಿಗೆ ಪಹಣಿಯಾಗಿದ್ದು, ಸದರಿ ಜಮೀನುಗಳು ಹುಸೇನಸಾಬ ಇವರ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿಯಲ್ಲ.

2. ನಬೀಸಾಬ ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರ ಹೆಸರು ಖಾಜಾಬಿ ಮತ್ತು ಬಾನುಬಿ ಅಂತಾ ಇದ್ದು ಅವರು ಈ ದಾವೆಯಲ್ಲಿ ವಾದಿಯರಾಗಿರುತ್ತಾರೆ. ಒಬ್ಬ ಗಂಡು ಮಗ ಇರುತ್ತಾನೆ. ಅವನ ಹೆಸರು

ಮೈನುದ್ದೀನ್ ಅಂತಾ ಇದ್ದು ಈ ದಾವೆಯಲ್ಲಿ 1ನೇ ಪ್ರತಿವಾದಿಯಾಗಿರುತ್ತಾನೆ. ದಾವೆಯ ಪ್ರತಿವಾದ ಪತ್ರದ ಮಾಹಿತಿಯನ್ನು ವಕೀಲರಿಗೆ ನಾನೇ ಹೇಳಿರುತ್ತೇನೆ. ವಾದಿಯರ ಮದುವೆಯಾಗಿ ಸುಮಾರು 40 ವರ್ಷಕ್ಕೂ ಮೇಲ್ಪಟ್ಟೂ ಆಗಿರುತ್ತದೆ. ಮದುವೆಯ ಸಮಯದಲ್ಲಿ ವಾದಿಯರಿಗೆ ತಲಾ 50 ಸಾವಿರ ರೂಪಾಯಿ ಮತ್ತು 5 ತೊಲೆ ಬಂಗಾರವನ್ನು ಕೊಟ್ಟಿರುತ್ತಾರೆ ಅವರ ಒಪ್ಪಿಗೆಯ ಮೇರೆಗೆ ನಾನು ಹೊಲವನ್ನು ಖರೀದಿ ಮಾಡಿರುತ್ತೇನೆ. ಮದುವೆಯ ಸಮಯದಲ್ಲಿ ವಾದಿಯರಿಗೆ ತಲಾ 50 ಸಾವಿರ ರೂಪಾಯಿ ಮತ್ತು 5 ತೊಲೆ ಬಂಗಾರವನ್ನು ಕೊಟ್ಟಿರುತ್ತಾರೆ ಎಂದು ವಾದಿಯರೆ ನನಗೆ ಹೊಲ ತೆಗೆದುಕೊಳ್ಳುವ ಮುಂಚೆ 2011 ರಲ್ಲಿ ಹೇಳಿರುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಮೇಲೆ ಹೇಳಿದಂತೆ ನಾನು ವಿಷಯಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಬೀಸಾಬ ಮತ್ತು ಅವರ ಮಕ್ಕಳ ನಡುವೆ ವಿಭಾಗ ಆಗಿದೆ ಎಂದು ನಾನು ಹೇಳಿ ಬರೆಸಿರುವುದಿಲ್ಲ.

3. ದಿನಾಂಕ: 03-09-2012 ರಂದು ನಾನು 1ನೇ ಪ್ರತಿವಾದಿಯಿಂದ ದಾವಾ ಹೊಲ ಖರೀದಿ ಮಾಡಿರುತ್ತೇನೆ. ಆ ಸಮಯದಲ್ಲಿ ನಬೀಸಾಬ ಇವರು ತೀರಿಕೊಂಡಿದ್ದರು ಅವರು ಯಾವಾಗ ತೀರಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ವಾದಿಯರ ಒಪ್ಪಿಗೆಯ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಖರೀದಿ ಸಮಯದಲ್ಲಿ ವಾದಿಯರಲ್ಲಿ ಒಬ್ಬರು ಹುಬ್ಬಳ್ಳಿ ಮತ್ತು ಇನ್ನೊಬ್ಬರು ಬೆಂಗಳೂರಿನ್ನಲಿ ವಾಸವಾಗಿದ್ದರು ನಿಖರವಾಗಿ ಯಾವ ವಾದಿ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಹೆಂಡತಿ ತೀರಿಕೊಂಡಿರುತ್ತಾರೆ ಆತನಿಗೆ 3 ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ ಇರುತ್ತಾನೆ. 1ನೇ ಪ್ರತಿವಾದಿಯ ಮಕ್ಕಳಿಗೆ ಖರೀದಿ ವಿಷಯ ಗೊತ್ತಿರುತ್ತದೆ. ಖರೀದಿ ಪತ್ರಕ್ಕೆ 1ನೇ ಪ್ರತಿವಾದಿಯ ಗಂಡು ಮಗ ಸಮ್ಮತಿ ಸಹಿ ಮಾಡಿರುತ್ತಾನೆ ಹೆಣ್ಣು ಮಕ್ಕಳು ಸಹಿ ಮಾಡಿರುವುದಿಲ್ಲ.

4. ದಾವಾ ಜಮೀನು ಸರ್ವೆ ನಂಬರ್ 65/3, ವಿಸ್ತೀರ್ಣ 02 ಎಕರೆ 31 ಗುಂಟೆ ಜಮೀನಿನ ಪಹಣಿ ಈಗ ನನ್ನ ಹೆಂಡತಿ ಹುಸೇನಬಿ ಇವರ ಹೆಸರಿನಲ್ಲಿರುತ್ತದೆ. ದಿನಾಂಕ: 25-06-2021 ರಂದು 4ನೇ

ಪ್ರತಿವಾದಿ ಹೆಸರಿಗೆ ಪಹಣಿ ಆಗಿರುತ್ತದೆ. ದಾವಾ ಜಮೀನು 4ನೇ ಪ್ರತಿವಾದಿ ಹೆಸರಿಗೆ ಪಹಣಿ ಆಗುವುದಕ್ಕಿಂತ ಮೊದಲೇ ವಾದಿಯರು ಮಾನ್ಯ ನ್ಯಾಯಾಲಯದಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸಲ್ಲಿಸಿದ ನಂತರ ನೀವು ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ದಾನಪತ್ರವನ್ನು ಮಾಡಿಸಿದ್ದೀರಾ ಎಂದರೆ ಸರಿ. ವಾದಿಯರಿಗೆ ಗೊತ್ತಾಗಲಾರದಂತೆ 1ನೇ ಪ್ರತಿವಾದಿ ನೀವು ಸೇರಿಕೊಂಡು ಖೊಟ್ಟಿ ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ.

5. ದಾವಾ ಜಮೀನು ಸರ್ವೆ ನಂಬರ್ 65, ವಿಸ್ತೀರ್ಣ 00-20 ಗುಂಟೆ ಜಮೀನು 1ನೇ ಪ್ರತಿವಾದಿ ತಾಜಮಹಲ್ ಶಾದಿಮಹಲ್ ಗಾಗಿ ದಾನ ಕೊಟ್ಟಿರುತ್ತಾರೆ. ಶಾದಿ ಮಹಲ್ ಕಟ್ಟುವ ಸಲುವಾಗಿ ದಾನ ಮಾಡುವುದಕ್ಕಿಂತ ಮೊದಲು ನೀವು ದಾವಾ ಜಮೀನು ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನಾವು ಜಮೀನು ಖರೀದಿಗೆ ಪಡೆಯುವಾಗ 20 ಗುಂಟೆ ಜಮೀನು ಬಿಟ್ಟು ಉಳಿಕೆ ಜಮೀನು ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ. ನಿ ಡಿ-1 ರ ಖರೀದಿ ಪತ್ರದಲ್ಲಿ ಜಮೀನು ಸರ್ವೆ ನಂಬರ್ 65/3, ವಿಸ್ತೀರ್ಣ 02 ಎಕರೆ 31 ಗುಂಟೆ ಮತ್ತು ಜಮೀನು ಸರ್ವೆ ನಂಬರ್ 65/2ಬ, ವಿಸ್ತೀರ್ಣ 03 ಎಕರೆ 16 ಗುಂಟೆ ಎರಡು ಪಟ್ಟಿ ಖರೀದಿಗೆ ಪಡೆದಿದ್ದೇವೆಂದು ಬರೆಸಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ ಸಾಕ್ಷಿ ಮುಂದುವರಿದು 20 ಗುಂಟೆ ಬಿಟ್ಟು ಉಳಿಕೆ ಜಮೀನು ಖರೀದಿ ಮಾಡಿರುತ್ತೇವೆ ಎಂದು ಮಾತುಕತೆಯಾಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಜಮೀನುಗಳನ್ನು 1ನೇ ಪ್ರತಿವಾದಿಯಿಂದ ನಾನು ಖರೀದಿ ಮಾಡಿದ ಮೇಲೆ 20 ಗುಂಟೆ ಜಮೀನು ಶಾದಿ ಮಹಲ್ ಗೆ ಬಿಟ್ಟುಕೊಟ್ಟಿದ್ದೇನೆಂದರೆ ಸರಿ. ದಾವಾ ಜಮೀನು ಖರೀದಿ ಮಾಡಿರುವ ಮತ್ತು 20 ಗುಂಟೆ ಜಮೀನು ಶಾದಿ ಮಹಲ್ ಗೆ ಬಿಟ್ಟುಕೊಟ್ಟಿರುವ ವಿಷಯ ವಾದಿಯರಿಗೆ ಗೊತ್ತಾಗಲಾರದಂತೆ ನೀವು ಮತ್ತು 1ನೇ ಪ್ರತಿವಾದಿ ಸೇರಿಕೊಂಡು ಮಾಡಿದ್ದೀರಿ ಎಂದರೆ ಸಾಕ್ಷಿಯು ಅವರಿಗೆ ಗೊತ್ತಿತ್ತು ಎನ್ನುತ್ತಾರೆ.

6. ನಬೀಸಾಬ ಇವರ ಆಸ್ತಿಗೆ ವಾದಿಯರು ಮತ್ತು 1ನೇ ಪ್ರತಿವಾದಿ ವಾರಸುದಾರರು ಆಗಿರುತ್ತಾರೆ ಎಂದರೆ ಸಾಕ್ಷಿಯು ಸರಿ ಇರುತ್ತದೆ ಎನ್ನುತ್ತಾರೆ ಆದರೆ ವಾದಿಯರು ಪಾಲನ್ನು ತೆಗೆದುಕೊಂಡಿರುತ್ತಾರೆಂದು

ಹೇಳುತ್ತಾರೆ. ನಬೀಸಾಬ ಇವರಿಗೆ ಸೇರಿದ ಆಸ್ತಿಯನ್ನು 1ನೇ ಪ್ರತಿವಾದಿಗೆ ವಾದಿಯರ ಒಪ್ಪಿಗೆ ಇಲ್ಲದೆ ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಮತ್ತು ನಿಮಗೆ ವಾದಿಯರ ಒಪ್ಪಿಗೆಯಿಲ್ಲದೆ 1ನೇ ಪ್ರತಿವಾದಿಯಿಂದ ದಾವಾ ಜಮೀನು ಖರೀದಿ ಪಡೆಯುವ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ವಾದಿಯರ ಒಪ್ಪಿಗೆ ಇತ್ತು ಎನ್ನುತ್ತಾರೆ. ವಾದಿಯರಲ್ಲಿ ಒಬ್ಬರು ಹುಬ್ಬಳ್ಳಿಯಲ್ಲಿ ಮತ್ತು ಇನ್ನೊಬ್ಬರು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುವುದರಿಂದ ಅವರಿಗೆ ಗೊತ್ತಾಗದಂತೆ ನೀವು ಖರೀದಿ ಪತ್ರ ಬರೆಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಅವರಿಗೆ ಗೊತ್ತಿದೆ ಅವರು ಊರಿಗೆ ಬಂದು ಹೋಗುತ್ತಾರೆ ಎನ್ನುತ್ತಾರೆ. ಖರೀದಿ ಪತ್ರದ ವಿಷಯ ವಾದಿಯರಿಗೆ ಗೊತ್ತಿತ್ತು ಎಂದು ನೀವು ಸುಳ್ಳು ಹೇಳುತ್ತಿರಿ ಎಂದರೆ ಸರಿಯಲ್ಲ. ವಾದಿಯರಿಗೆ ಅನ್ಯಾಯಾ ಮಾಡಬೇಕೆಂದು 1ನೇ ಪ್ರತಿವಾದಿಯೊಂದಿಗೆ ಸೇರಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಭಾಗಾಂಶದ ಹಕ್ಕು ಇದೆ ಎಂದರೆ ಸಾಕ್ಷಿಯು ಇಲ್ಲ ಅವರಿಗೆ ಬೇರೆ ಜಾಲಹಳ್ಳಿಯಲ್ಲಿ 2 ಮನೆ ಮತ್ತು ಪರಾಪುರ ಗ್ರಾಮದಲ್ಲಿರುವ ಸರ್ವೆ ನಂಬರ್ 48 ರಲ್ಲಿ 07 ಎಕರೆ 32 ಗುಂಟೆ ಹೊಲ ಇದೆ ಎಂದು ಹೇಳುತ್ತಾರೆ. ಜಾಲಹಳ್ಳಿಯಲ್ಲಿ 2 ಮನೆ ಮತ್ತು ಪರಾಪುರ ಗ್ರಾಮದಲ್ಲಿರುವ ಸರ್ವೆ ನಂಬರ್ 48 ರಲ್ಲಿ 07 ಎಕರೆ 32 ಗುಂಟೆ ಹೊಲಗಳು ಹುಸೇನಸಾಬ ಇವರ ಭಾಗಕ್ಕೆ ಬಂದಿರುತ್ತವೆ ಎಂದರೆ ಸಾಕ್ಷಿಯು ಇಲ್ಲ ನಬಿಸಾಬ ಇವರ ಭಾಗಕ್ಕೆ ಬಂದಿರುತ್ತದೆ ಎನ್ನುತ್ತಾರೆ.

**ಪಾಟಿಸವಾಲು:** ಪ್ರತಿವಾದಿ ನಂಬರ್ 1, 3 ರವರು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲ.**

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ